ಅದರ ತೀವ್ರತೆಗೆ ಅನುಗುಣವಾಗಿ ಕೇಳುವಿಕೆಯ ಸಾಮರ್ಥ್ಯ ನಿರ್ಧರಿಸಬೇಕಾಗಿದೆ. ಇದರ ಸೂಕ್ಷ್ಮ ಪರೀಕ್ಷೆಗೆ ನೀವು ಶ್ರವಣ ಶಾಸ್ತ್ರಜ್ಞರನ್ನು ಭೇಟಿ ಮಾಡಬೇಕು' ಎಂದರು. ಆ ತಾಯಿಗೆ ಮತ್ತಷ್ಟು ದುಃಖ ಉಮ್ಮಳಿಸಿ ಬಂತು. ನೊಂದ ದನಿಯಲ್ಲಿಯೇ 'ಸಾರ್, ನಾವು ಹಳ್ಳಿಯ ಜನ. ನಮಗೆ ಅವರೆಲ್ಲ ಎಲ್ಲಿ ಸಿಗುತ್ತಾರೆಂದೂ ಗೊತ್ತಿಲ್ಲ. ನಾವು ಬಡವರು,  ನೀವು ಹೇಳುವ ದೊಡ್ಡ ದೊಡ್ಡ ವೈದ್ಯರ ಬಳಿ ಕರೆದುಕೊಂಡು ಹೋಗಲು ನಮ್ಮ ಬಳಿ ಹಣವಿಲ್ಲ. ಹೇಗಾದರೂ ಮಾಡಿ ನೀವೇ ನಮ್ಮ ಮಗುವಿಗೆ ಮಾತು ಬರುವಂತೆ ಮಾಡಿ' ಎಂದು ಅಂಗಲಾಚಿ ಬೇಡಿದಳು. ವೈದ್ಯರ ಮನ ಕರಗಿತು. ಆ ತಾಯಿಯ ಆಕ್ರಂದನ, ನೋವು, ಕಣ್ಣೀರು ಅವರನ್ನು ಕ್ಷಣಕಾಲ ಮೌನವಾಗಿಸಿತು.

'ಸಮಾಧಾನ ಮಾಡಿಕೊಳ್ಳಮ್ಮಾ.. ಪ್ರತಿಯೊಂದು ಸಮಸ್ಯೆಗೂ ಪರಿಹಾರವಿದೆ. ಧೈರ್ಯ ತಂದುಕೋ. ನೀವು ಹೇಳಿದಂತೆ ಹೆಚ್ಚು ಹಣದ ಅವಶ್ಯಕತೆಯಿಲ್ಲ. ಕೇಂದ್ರ ಸರ್ಕಾರದ ವತಿಯಿಂದ ದೇಶದ ನಾನಾ ಭಾಗಗಳಲ್ಲಿ ಹಲವಾರು ಸಂಸ್ಥೆಗಳು ಕಿವಿ ತೊಂದರೆಯನ್ನು ಗುರುತಿಸುವ, ಕಾರಣಗಳನ್ನು ತಿಳಿಯುವ, ಪರಿಹಾರೋಪಾಯಗಳನ್ನು ಕಂಡುಹಿಡಿಯುವ, ಇದರ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ಕಾಗಿ ಸ್ಥಾಪನೆಯಾಗಿದೆ. ಅಷ್ಟೇ ಅಲ್ಲದೆ ಕಡಿಮೆ ವೆಚ್ಚದಲ್ಲಿ/ ಉಚಿತವಾಗಿ ಇಂತಹ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ನೀವು ನಂಜನಗೂಡಿನವರಲ್ವೆ... ನಿಮಗೆ ಒಂದು ಸದಾವಕಾಶವಿದೆ. ಈ ರೀತಿಯ ಸೇವೆಗಳನ್ನು ನೀಡಲಿಕ್ಕಾಗಿಯೇ ಕೇಂದ್ರ ಸರ್ಕಾರದ ವತಿಯಿಂದ ಮೈಸೂರಿನ, ಮಾನಸ ಗಂಗೋತ್ರಿಯ ಬಳಿ ನೈಮಿಷನ್ ಕ್ಯಾಂಪಸ್‌ನಲ್ಲಿ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ ಸ್ಥಾಪಿತವಾಗಿದೆ. ನೀವು ಅಲ್ಲಿ ಹೋಗಿ ಸಂಪರ್ಕಿಸಿ' ಎಂದು ವೈದ್ಯರು ಸಮಾಧಾನ ಪಡಿಸಿದರು.

ವೈದ್ಯರ ಮಾತುಗಳನ್ನು ಮೆಲುಕು ಹಾಕುತ್ತಾ ಮನೆಗೆ ಬಂದವಳಿಗೆ ಮನೆಯಲ್ಲಿ ಯಾರ ಜೊತೆಗೆ ಇದನ್ನೆಲ್ಲಾ ಹೇಳುವುದು ಎಂಬ ಭಯ ಆವರಿಸಿತು. ಸಂಜೆಯಿಡೀ ಮನಸ್ಸಿನಲ್ಲಿ, ಎಲ್ಲರೂ ತನ್ನನ್ನು ಹೇಗೆ ನೋಡುತ್ತಾರೋ, ತನ್ನ ಮಗಳನ್ನು ಎಲ್ಲಿ ತಿರಸ್ಕರಿಸಿಬಿಡುವರೂ, ತಾನೆಂಥ ಪಾಪಿ, ತನಗೇಕೆ ಈ ಶಿಕ್ಷೆ, ಏನು ಮಾಡಲಿ... ಹೀಗೆ ಒಂದರ ಮೇಲೆ ಒಂದರಂತೆ ಬಂದ ಕೆಟ್ಟ ಯೋಚನೆಗಳು ಅವಳನ್ನು ಹಣ್ಣು ಮಾಡಿದವು.

ಮನೆಯಲ್ಲಿ ಎಲ್ಲರಿಂದಲೂ ಪ್ರಶ್ನೆಗಳ ಸುರಿಮಳೆ. 'ಏನಂದರು ಡಾಕ್ಟರ್? ಮಾತ್ರೆ, ಸಿರಪ್ ಏನಾದ್ರು ಕೊಟ್ರಾ? ಯಾವಾಗ ಮಾತಾಡ್ತಾಳಂತೆ?' ಪ್ರಶ್ನೆಗಳಿಗೆ ಆಕೆಗೆ ತಲೆ ಧಿಮ್ಮೆಂದಿತು. ಸಾವಧಾನವಾಗಿ ಬಾಯಿ ತೆರೆದು, ವೈದ್ಯರು ಹೇಳಿದ್ದನ್ನೆಲ್ಲಾ ಚಾಚೂ ತಪ್ಪದೆ ಹೇಳಿದಳು. ಮನೆಯವರು ಯಾರೂ ಮಾತನಾಡಲಿಲ್ಲ. 'ಅಯ್ಯೊ.. ಅದು ದೊಡ್ಡ ಆಸ್ಪತ್ರೆ ಇರಬೇಕು. ಅಷ್ಟು ದೂರ ಹೋಗುವುದೆ?' ಎನ್ನುವುದು ಎಲ್ಲರ ಮನಸ್ಸಿನೊಳಗಿದ್ದ ಪ್ರಶ್ನೆ. ತಿಂಗಳು ಕಳೆಯಿತು. ಆ ತಾಯಿಗಾಗಲೀ, ಆ ಕಂದಮ್ಮನ ಸ್ಥಿತಿಗಾಗಲೀ, ಓಗೊಡುವವರು ಅಲ್ಲಿರಲಿಲ್ಲ. ಕ್ರಮೇಣ ಅತ್ತೆ ಮಾವನ ಚುಚ್ಚು ಮಾತುಗಳು, ನೆರೆಹೊರೆಯವರ ಗುಸುಗುಸು, ಗಂಡನ ಮೌನ, ಮಗುವಿನ ಮುಗ್ಧತೆ, ಆಕೆಯ ಅಸಹಾಯಕತೆ ಎಲ್ಲವೂ ಸೇರಿಕೊಂಡಿತು.

ಆದರೆ ಹೀಗೆಯೇ ಸುಮ್ಮನಿದ್ದರೆ ಹೇಗೆ? ಹೀಗೆ ಮನೆಯವರೆಲ್ಲ ನಿರ್ಲಕ್ಷ್ಯ ಮಾಡಿದರೂ, ನಾನು ತಾಯಿಯಾಗಿ ಸುಮ್ಮನಿರುವುದು ಎಷ್ಟು ಸರಿ.. ಎನ್ನುವ ಪ್ರಶ್ನೆ ಆಕೆಯನ್ನು ಕಾಡಿತು. ಕಣ್ಣೀರಿನಿಂದ ತಾನೇ ಹೊರಬಂದು ಗಟ್ಟಿ ಧ್ವನಿಯಿಂದ ತನ್ನ ಮಗುವಿನ ಪರವಾಗಿ ಮಾತನಾಡಲೇಬೇಕು ಎಂದಾಕೆ ಕೊನೆಗೊಂದು ದಿನ ನಿರ್ಧರಿಸಿದಳು. ಆಕೆಯ ಪ್ರಾಮಾಣಿಕ ಪ್ರಯತ್ನ ಫಲ ಕೊಟ್ಟಿತು. ಪತಿಯ ಜೊತೆಗೂಡಿ ಮಗುವನ್ನು ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಗೆ ಕರೆತಂದಳು. ಆಗ ಆಲಿಷಾಗೆ 4 ವರ್ಷಗಳಾಗಿತ್ತು.

ಸಂಸ್ಥೆಯಲ್ಲಿ ಮಗುವಿನ ಸಂಪೂರ್ಣ ವ್ಯಕ್ತಿ ವಿವರ ನೀಡಿ ಮಗುವಿನ ನೊಂದಾವಣಿ ಮಾಡಿಸಿದರು. ಅವರ ಸೂಚನೆಯಂತೆ ಸಂಸ್ಥೆಯ ಶ್ರವಣ ಶಾಸ್ತ್ರ ವಿಭಾಗದಲ್ಲಿ ಶಾಸ್ತ್ರಜ್ಞರಿಂದ ಸೂಕ್ಷ್ಮವಾಗಿ ಕಿವಿಯನ್ನು ತಪಾಸಣೆ ಮಾಡಿಸಲಾಯಿತು. ಸತತ 2 ದಿನಗಳ ಸೂಕ್ಷ್ಮ ಪರೀಕ್ಷೆಯ ನಂತರ ಶ್ರವಣ ಶಾಸ್ತ್ರಜ್ಞರು ಫಲಿತಾಂಶವನ್ನು ಆ ದಂಪತಿಯ ಮುಂದೆ ಇಟ್ಟರು.

'ನೋಡಿ, ನಿಮ್ಮ ಮಗುವಿಗೆ ಶ್ರವಣ ದೋಷವಿದೆ. ಸಾಮಾನ್ಯ ಜನರು 20 ರಿಂದ 25 ಡೆಸಿಬಲ್ ಶಬ್ದಕ್ಕೆ ಪ್ರತಿಕ್ರಿಯೆ ನೀಡುತ್ತಾರೆ. ಆದರೆ ನಿಮ್ಮ ಮಗುವಿನ ಶ್ರವಣ ಸಾಮರ್ಥ್ಯ 70 ಡೆಸಿಬಲ್ ಇದೆ. ಆದ್ದರಿಂದ ನಿಮ್ಮ ಮಗು ಕೇಳಿಸಿಕೊಳ್ಳುತ್ತಿಲ್ಲ. ನಿಮ್ಮ ಮಗುವಿಗೆ ಶ್ರವಣ ಯಂತ್ರದ ಅವಶ್ಯಕತೆ ಇದೆ. ಅದನ್ನು ಅಳವಡಿಸಿದರೆ ಆ ಯಂತ್ರವು ಶಬ್ದದ ತೀವ್ರತೆ ಹೆಚ್ಚಿಸಿ ಮಗು ಕೇಳಿಸಿಕೊಳ್ಳಲು ಸಹಾಯ ಮಾಡುತ್ತದೆ' ಎಂದರು. ಆ ದಂಪತಿ ಕಣ್ಣಲ್ಲಿ ಮತ್ತದೇ ದುಃಖದ ಕಣ್ಣೀರು. ಜೊತೆಗೆ ಅನುಮಾನ. 'ಅಯ್ಯೋ ಡಾಕ್ಟರ್, ಕಿವಿಗೆ ಯಂತ್ರ ಹಾಕಲೇಬೇಕಾ? ಅದು ಮಗುವಿನ ಕಿವಿಗೆ ಹಾನಿ ಉಂಟು ಮಾಡುವುದಿಲ್ಲವೇ? ಕರೆಂಟ್ ಹೊಡೆದರೆ?' ಎಂಬಿತ್ಯಾದಿ ಮುಗ್ಧ ಪ್ರಶ್ನೆಗಳು.

'ಹಾಗೇನೂ ಇಲ್ಲಮ್ಮಾ. ಅದು ಒಂದು ಸಣ್ಣ ಸಾಧನ. ಆ ಸಾಧನದಿಂದ ನಿಮ್ಮ ಮಗುವಿಗೆ ಕೇಳುವಿಕೆಯ ಸಾಮರ್ಥ್ಯ ಹೆಚ್ಚುತ್ತದೆ. ಅದು ನೀವು ಫೋನ್‌ನಲ್ಲಿ ಹಾಡು ಕೇಳಲು ಬಳಸುವ ಒಂದು ಹಿಯರ್ ಫೋನ್ ಥರಾ ಅಷ್ಟೇ' ಎಂದರು ಡಾಕ್ಟರ್.

***

ಇದು ಒಬ್ಬ ಆಲಿಷಾ ಕತೆಯಲ್ಲ. ಇಂತಹ ಸಾವಿರಾರು ಪ್ರಕರಣಗಳು ನಮ್ಮ ವಾಕ್‌ಶ್ರವಣ ಸಂಸ್ಥೆಗೆ ಬಂದಿವೆ, ಬರುತ್ತಿವೆ. ಮಕ್ಕಳ ಕಿವುಡುತನದ ಬಗ್ಗೆ ಪೋಷಕರಲ್ಲಿ ಸಾಕಷ್ಟು ಅಜ್ಞಾನ, ಅರೆಜ್ಞಾನಗಳಿವೆ. ಪ್ರಶ್ನೆಗಳಂತೂ ನೂರಾರು.

